**ದಿಃ22-07-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಆರ್.ಎಂ.ಓ. ವಕೀಲರಿಂದಃ**

1. ಚನ್ನಬಸಪ್ಪ ಮತ್ತು ಸಣ್ಣವೀರಮ್ಮ ನನ್ನ ತಂದೆ ತಾಯಿಯರು ಎಂದರೆ ಸರಿ. ನನ್ನ ತಂದೆ ತಾಯಿಗೆ ನಾನು ಮತ್ತು ಪ್ರತಿವಾದಿ ಮಾತ್ರ ಮಕ್ಕಳು ಎಂದರೆ ಸರಿ. ನನ್ನ ತಂದೆಗೆ ಒಂದು ಜಮೀನು ಮತ್ತು ಒಂದು ಮನೆ ಮಾತ್ರ ಇತ್ತು ಎಂದರೆ ಸರಿ. ನಾನು ಈ ದಾವೆಯನ್ನು ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ ಎಂದರೆ ಸರಿ. ನಮ್ಮ ತಂದೆಗೆ ಸೇರಿದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಅನುಸೂಚಿತ ಸ್ವತ್ತು ನನ್ನ ತಂದೆಗೆ ದಿನಾಂಕ 20.08.1960 ರಂದು ದರಕಾಸ್ತಿನ ಮೂಲಕ ಮಂಜೂರಾಗಿತ್ತು ಎಂದರೆ ಸರಿ. ಸದರಿ ಸ್ವತ್ತಿನ ಪೈಕಿ ಸ್ವತ್ತಿನ ಎರಡೂ ದಿಕ್ಕುಗಳಿಗೆ ರಸ್ತೆ ಹೋಗಿದ್ದು, ಖರಾಬನ್ನು ಕಳೆದು ಉಳಿಕೆ 3 ಎಕರೆ ಜಮೀನು ಮಾತ್ರ ಸಾಗುವಳಿ ಮಾಡಲು ಯೋಗ್ಯವಾಗಿದೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಯ ಜೀವಿತ ಅವಧಿಯಲ್ಲಿ ನನ್ನನ್ನು ಕ್ಯಾತನಹಳ್ಳಿಗೆ ಕೊಟ್ಟು ವಿವಾಹ ಮಾಡಿದ್ದರು ಎಂದರೆ ಸರಿ. ನನ್ನ ವಿವಾಹದ ನಂತರದಲ್ಲಿ ಪ್ರತಿವಾದಿ ನನ್ನ ತಂದೆ ತಾಯಿಯೊಂದಿಗೆ ಇದ್ದರು ಎಂದರೆ ಸಾಕ್ಷಿ ನನ್ನ ಜೊತೆಯಲ್ಲಿಯೂ ಇರುತ್ತಿದ್ದರು, ಆದರೆ ನನ್ನ ತಂದೆ ತಾಯಿಯೊಂದಿಗೆ ಇದ್ದರು ಎಂದು ಹೇಳುತ್ತಾರೆ.

2. ನನ್ನ ತಂಗಿಯನ್ನು ವಿವಾಹ ಮಾಡಿಕೊಟ್ಟ ನಂತರದಲ್ಲಿ ನನ್ನ ತಂಗಿಯನ್ನು ಮತ್ತು ಆಕೆಯ ಪತಿಯನ್ನು ನನ್ನ ತಂದೆ ತಾಯಿ ಜೊತೆಯಲ್ಲಿಯೇ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿ ನನ್ನ ತಂದೆ ತಾಯಿಯ ಊರಿನಲ್ಲಿಯೇ ಬೇರೆ ಇದ್ದರು ಎಂದು ಹೇಳುತ್ತಾರೆ. ನನ್ನ ವಿವಾಹದ ನಂತರದಲ್ಲಿ ನನ್ನ ತಂದೆ ತಾಯಿಯೊಂದಿಗೆ ಪ್ರತಿವಾದಿ ತವರು ಮನೆಯಲ್ಲಿಯೇ ಇದ್ದು, ನನ್ನ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ವಿವಾಹದ ನಂತರ ನಾನು ಯಾವುತ್ತೂ ಸಹ ಬಂಡೆ ಬೊಮ್ಮನಹಳ್ಳಿಯಲ್ಲಿ ವಾಸವಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆತಾಯಿಯನ್ನು ನೋಡಿಕೊಳ್ಳಲು ಹೋಗಿ ಬರುತ್ತಿದ್ದೆನು ಎಂದು ಹೇಳುತ್ತಾರೆ.

3. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯಲ್ಲಿನ ತನ್ನ ಮತ್ತು ಪ್ರತಿವಾದಿಯ ಸಹಿಯನ್ನು ಒಪ್ಪಿಕೊಂಡಿರುತ್ತಾರೆ. (ಸಾಕ್ಷಿಗೆ ತೋರಿಸಲಾದ ದಾಖಲಾತಿಗೆ ಸಂಬಂಧಿಸಿದಂತೆ ವಾದಿಯು ಮುದ್ರಾಂಕಗಳ ಉಪ ಆಯುಕ್ತರು, ಚಿತ್ರದುರ್ಗರವರಲ್ಲಿ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಿದ್ದು, ಸದರಿ ದಾಖಲಾತಿಯನ್ನು ನೋಂದಣಿ ಅಧಿನಿಯಮದ ನಿಬಂಧನೆಗಳಿಗೆ ಒಳಪಟ್ಟು ಮತ್ತು ಸದರಿ ದಾಖಲಾತಿಯನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಕಾರ ರುಜುವಾತುಪಡಿಸುವ ನಿಬಂಧನೆಗೆ ಒಳಪಟ್ಟು ಕಡತಕ್ಕೆ ತೆಗೆದುಕೊಳ್ಳಲಾಯಿತು). ಸಾಕ್ಷಿಗೆ ತೋರಿಸಲಾದ ದಿನಾಂಕ 07.07.2000 ರ ಕರಾರು ಪತ್ರವನ್ನು ನಿಡಿ.1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಡಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ತೋರಿಸಲಾದ ದಾಖಲಾತಿಯನ್ನು ದಿನಾಂಕ 07.07.2000 ರಂದು ಜಾರಿಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ನಿಡಿ.1 ರ ಸಹಿ ನನ್ನದಲ್ಲ ಎಂದು ಈಗ ಹೇಳುತ್ತಾರೆ. ನನ್ನ ತಂದೆ ತಾಯಿಯ ಮರಣಾ ನಂತರ ದಾವಾ ಸ್ವತ್ತನ್ನು ಪ್ರತಿವಾದಿಯೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ತಾಯಿಯ ಮರಣಾ ನಂತರ ಆಕೆಯೇ ಜಮೀನನ್ನು ನೋಡಿಕೊಳ್ಳುತ್ತಿದ್ದು, ನನಗೆ ಯಾವುದೇ ಆದಾಯ ನೀಡುತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದ ನನ್ನ ತಂದೆಯ ಮನೆಗೆ ಸಂಬಂಧಿಸಿದಂತೆ ರೂ.50,000/- ಮೌಲ್ಯದ ಪೈಕಿ ನಾನು ನನ್ನ ತಂಗಿಯಿಂದ ರೂ.25,000/- ಹಣವನ್ನು ಪಡೆದುಕೊಂಡು ನನ್ನ ತಂಗಿಗೆ ಮನೆಯನ್ನು ಬಿಟ್ಟುಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ವಾದ ಪತ್ರದಲ್ಲಿ ನನ್ನ ತಂದೆಗೆ ಸೇರಿದ ಮನೆಯನ್ನು ನನ್ನ ತಂಗಿಗೆ ಬಿಟ್ಟುಕೊಟ್ಟಿದ್ದು, ಆ ಪೈಕಿ ನನ್ನ ತಂಗಿಯಿಂದ ರೂ.25,000/- ಪಡೆದುಕೊಂಡಿದ್ದೇನೆ ಎಂದು ಹೇಳಿಲ್ಲ.

4. ನನ್ನ ತಂದೆಗೆ ಸೇರಿದ ಮನೆಯನ್ನು ಪ್ರತಿವಾದಿಯಾದ ನನ್ನ ತಂಗಿ ರೂ.50,000/-ಕ್ಕೆ ಆಕೆಯ ಸಾಲ ತೀರಿಸುವ ಸಲುವಾಗಿ ಮಾರಾಟ ಮಾಡುವುದಾಗಿ ಹೇಳಿದ್ದು, ಆಗ ನಾನು ನನ್ನ ತಂಗಿಯಿಂದ ರೂ.50,000/- ಮೊತ್ತದ ಪೈಕಿ ರೂ.25,000/- ಹಣವನ್ನು ಪಡೆದುಕೊಂಡಿದ್ದೆನು, ಹಾಗಾಗಿ ನನ್ನ ತಂದೆಗೆ ಸೇರಿದ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಪ್ರತಿವಾದಿಯಿಂದ ಮನೆಯನ್ನು ಖರೀದಿಸಿದಂತಹ ಕ್ರಯದಾರರಿಗೆ ನೋಂದಣಿ ಮಾಡಿಸಿಕೊಳ್ಳಲು ಸಹಿ ಬೇಕು ಎಂಬ ಕಾರಣಕ್ಕಾಗಿ ಸಹಿ ಮಾಡಿಕೊಟ್ಟಿರುತ್ತೇನೆ.

5. ಈಗ ಪ್ರತಿವಾದಿಯು ವಾಸಿಸುತ್ತಿರುವ ಮನೆ ದಾವಾ ಜಮೀನಿನಲ್ಲಿ ಇದೆ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿ ಸುಮಾರು 30 ರಿಂದ 32 ವರ್ಷಗಳಾಗಿದೆ. ದಾವಾ ಸ್ವತ್ತಿನಲ್ಲಿ ಇರುವ ಮನೆಯನ್ನು ಪ್ರತಿವಾದಿ ಮತ್ತು ಆಕೆಯ ಪತಿ ನನ್ನ ತಂದೆ ತಾಯಿ ಜೀವಂತ ಇದ್ದಾಗಲೇ ಕಟ್ಟಿದ್ದರು. ದಾವಾ ಸ್ವತ್ತಿನಲ್ಲಿ ಇರುವಂತಹ ಮನೆ ಆರ್.ಸಿ.ಸಿ. ಮೇಲ್ಛಾವಣಿಯಿಂದ ಕೂಡಿದ ಮನೆ ಎಂದರೆ ಸರಿ. ಸದರಿ ಮನೆಯನ್ನು ಕಟ್ಟಿದ ದಿನದಿದಂದಲೂ ದಾವಾ ಸ್ವತ್ತಿನ ಮನೆಯಲ್ಲಿ ಪ್ರತಿವಾದಿ ಮತ್ತು ಆಕೆಯ ಪತಿ ಹಾಗೂ ಮಕ್ಕಳೇ ವಾಸಿಸುತ್ತಿದ್ದಾರೆ ಎಂದರೆ ಸರಿ.

6. ನಾನು 2000 ನೇ ಸಾಲಿನಲ್ಲಿ ಪ್ರತಿವಾದಿಯ ಬಳಿ ದಾವಾ ಸ್ವತ್ತಿನಲ್ಲಿ ಮತ್ತು ಮನೆಯಲ್ಲಿ ನನಗೆ ಭಾಗ ಕೊಡು ಎಂದು ನನ್ನ ತವರು ಮನೆಯ ಗ್ರಾಮದವರಾದ ಹಾಗೂ ಪಂಚಾಯಿತಿದಾರರಾದ ಚಂದ್ರಪ್ಪ ಮತ್ತು ಶೇಖರಪ್ಪ ರವರ ಸಮಕ್ಷಮ ಕೇಳಿದ್ದೆನು ಎಂದರೆ ಸರಿಯಲ್ಲ. ನಾನು ಪಂಚಾಯಿತಿದಾರರ ಸಮಕ್ಷಮ ದಾವಾ ಸ್ವತ್ತು ಮತ್ತು ಮನೆಯ ಕುರಿತಾಗಿ ರೂ.25,000/- ಹಣವನ್ನು ಪ್ರತಿವಾದಿಯಿಂದ ಪಡೆದುಕೊಂಡು ಸದರಿ ಸ್ವತ್ತುಗಳ ಕುರಿತು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 2000 ನೇ ಸಾಲಿನಲ್ಲಿ ನಾನು ದಾವಾ ಸ್ವತ್ತಿನ ಕುರಿತು ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲು ಕಂದಾಯ ಅಧಿಕಾರಿಗಳ ಸಮಕ್ಷಮ ಹಾಜರಾಗಿ ಸಮ್ಮತಿ ನೀಡಿದ್ದೆನು ಎಂದರೆ ಸಾಕ್ಷಿ ಪ್ರತಿವಾದಿ ಜಮೀನಿನ ಮೇಲೆ ಸಾಲ ಪಡೆದಿದ್ದು, ಸದರಿ ಸಾಲದ ಕುರಿತಾಗಿ ನಾನು ಸಹಿ ಮಾಡಿದ್ದೆನು, ಅದನ್ನು ಹೊರತುಪಡಿಸಿ ನಾನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಯಾವುದೇ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ.

7. ಪ್ರತಿವಾದಿ ಕರೆಕಟ್ಟೆ ಗ್ರಾಮದ ಕುಬೇರಪ್ಪರವರ ಬಳಿ ಸಾಲ ಮಾಡಿದ್ದರು. ಸದರಿ ಕುಬೇರಪ್ಪರವರ ಮಗ ರವಿಕುಮಾರ್ ಶಿವಮೊಗ್ಗದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಕುಬೇರಪ್ಪರವರು ಪ್ರತಿವಾದಿ ಮತ್ತು ಆಕೆಯ ಪತಿಯ ವಿರುದ್ಧ ದಾವಾ ಸ್ವತ್ತಿನ ಕುರಿತು ನಿರ್ಧಿಷ್ಟ ನೆರವೇರಿಕೆಯ ಪರಿಹಾರವನ್ನು ಕೋರಿ ಹೊಳಲ್ಕೆರೆಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯ ಕುರಿತು ಇದೇ ನ್ಯಾಯಾಲಯದಲ್ಲಿ ಆರ್.ಎ. ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರದ ಕುರಿತು ಕುಬೇರಪ್ಪ ಮತ್ತು ಪ್ರತಿವಾದಿ ಮತ್ತು ಆಕೆಯ ಪತಿಯ ನಡುವೆ

ಗಲಾಟೆ ಕೂಡ ಆಗಿತ್ತು ಎಂದರೆ ಸರಿ. ಅಂತಿಮವಾಗಿ ಇಬ್ಬರು ರಾಜೀ ಮಾಡಿಕೊಂಡು ಪ್ರತಿವಾದಿ ಕುಬೇರಪ್ಪರವರಿಗೆ ಕ್ರಯದ ಕರಾರಿನ ಕುರಿತು ಹಣವನ್ನು ಮರುಪಾವತಿಸಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡರು ಎಂದರೆ ಸರಿ. ಕುಬೇರಪ್ಪರವರ ಮಗನಾದ ಹಾಗೂ ವಕೀಲರಾದ ರವಿಕುಮಾರ್‌ರವರು ನನ್ನ ಪರವಾಗಿ ಈ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ